ಟ್ರಂಕಿನಲ್ಲಿರುವ ಸಾಮಾನುಗಳ ಸುರಕ್ಷತೆಯ ಬಗ್ಗೆ ನೆಮ್ಮದಿಯಿಂದ ಇರುತ್ತಿದ್ದರು. ಅವರವರ ಟ್ರಂಕುಗಳನ್ನು ತೆಗೆಯುವ ಸಂದರ್ಭದಲ್ಲಿ, ಅವುಗಳ ಮೇಲಿದ್ದ ಬೇರೆ ಟ್ರಂಕುಗಳನ್ನು, ಎರಡೂ ಕೈಗಳಿಂದ, ಅದರ ಎರಡೂ ಬದಿಯಲ್ಲಿ ಕಿವಿಗಳಂತಿದ್ದ ಹಿಡಿಕೆಯನ್ನು ಹಿಡಿದು ಪಕ್ಕಕ್ಕೆ ಇಳಿಸುವಾಗ ಅಲುಗಾಡಿಸಿ ಪರೀಕ್ಷಿಸುವುದನ್ನು ಪ್ರತಿಯೊಬ್ಬರೂ ಒಬ್ಬರಿಗೊಬ್ಬರಿಗೆ ತಿಳಿಯದಂತೆ ಮಾಡಿರುತ್ತಿದ್ದರು. ಏನಾದರೂ ಹೊಸ ಶಬ್ದ ಕೇಳುತ್ತಿದ್ದಂತೆ, ಅದೇನು ಮುಚ್ಚಿಟ್ಟುಕೊಂಡಿದ್ದಾಳೋ ಎಂದು ಗೊಣಗುತ್ತಿದ್ದರು. ಮನೆಯಲ್ಲಿರುವ ಮಕ್ಕಳಂತೂ, ಯಾರಾದರೂ ಟ್ರಂಕ್ ತೆಗೆಯುವ ಶಬ್ದ ಕೇಳಿಸುತ್ತಿದ್ದಂತೆ, ಎಲ್ಲಿದ್ದರೂ ಓಡಿಬಂದು ಅದರ ಮುಂದೆ ಕುಳಿತುಬಿಡುತ್ತಿದ್ದರು. ಅಲ್ಲಾದೀನ್‌ನ ದೀಪದಂತೆ ಏನಾದರೂ ಸಿಗಬಹುದೇನೋ ಎನ್ನುವ ಕುತೂಹಲ ಸದಾ ಕಣ್ಣಲ್ಲಿ ಇಣುಕುತ್ತಿತ್ತು. ಇನ್ನು ಆ ಟ್ರಂಕುಗಳ ಮೇಲೂ ಆ ಕೋಣೆಯಲ್ಲಿ ಮಲಗುವವರ ಹಾಸಿಗೆಗಳು, ಜಮಖಾನಗಳು, ಬೆಡ್‌ಶೀಟುಗಳು, ದಿಂಬುಗಳು ಸಮತೋಲನ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಿದ್ದವು. ಅಲ್ಲಲ್ಲಿ ಅಂಚು ಕಿತ್ತುಹೋದ, ಕೆಲವು ಸಾಲುಗಳ ಕಡ್ಡಿಯೂ ಕಿತ್ತಿರುತ್ತಿದ್ದ ಬಿದಿರಿನ ಚಾಪೆಗಳು, ಟ್ರಂಕ್‌ನ ಹಿಂಭಾಗದ ಮೂಲೆಯಲ್ಲಿ ಸಿಲುಕಿಕೊಂಡು ಒದ್ದಾಡುತ್ತಿದ್ದವು.

ಸ್ನಾನದ ನಂತರ ಹೆಣ್ಣುಮಕ್ಕಳೆಲ್ಲ ಮೊದಲು ಪ್ರವೇಶ ಕೊಡುತ್ತಿದ್ದುದೇ ಈ ದೇವರಕೋಣೆಗೆ. ಕೈಮುಗಿಯುವುದಕ್ಕಾಗಿ ಎಂದು ತಪ್ಪು ತಿಳಿದುಕೊಂಡೀರಿ, ಅದು ನಂತರದ ಮಾತು. ಬಚ್ಚಲಿಗೆ ಹತ್ತಿರವಾಗಿ ಇದೇ ಕೋಣೆ ಹತ್ತಿರವಿದ್ದುದರಿಂದ, ಇಕ್ಕಟ್ಟಾದ ಬಚ್ಚಲಿನಲ್ಲಿ ಸರಿಯಾಗಿ ಬಟ್ಟೆ ಉಡಲಾಗದೆ, ಅಡರಬಡರ ಸುತ್ತಿಕೊಂಡು ಈ ಕೋಣೆಗೆ ಬಂದು ನೆಮ್ಮದಿಯಾಗಿ, ನಿರಾಳವಾಗಿ ತೊಡುವುದಿತ್ತು. ಮತ್ತೊಂದು ಕಾರಣವೆಂದರೆ, ಇಡೀ ಮನೆಯ ಹೆಣ್ಣುಮಕ್ಕಳ ಒಗೆದ ಒಣಬಟ್ಟೆಗಳೆಲ್ಲ ದೇವರ ಕೋಣೆಯ ಒಂದು ಗೋಡೆಯ ಬದಿಯಲ್ಲಿ, ತಾರಸಿಯ ಎರಡು ಮೂಲೆಯಲ್ಲಿದ್ದ ದುಂಡನೆಯ ಲಾಳಿಕೆಯ ಮೂಲಕ ಹಗ್ಗ ಇಳಿಬಿಟ್ಟು, ಬಿದಿರಿನ ಕೋಲನ್ನು ಕಟ್ಟಿದ್ದರಿಂದ, ಆ ಜೋತಾಡುವ ಗಳಕ್ಕೆ ನೇತುಬಿದ್ದಿರುತ್ತಿದ್ದವು. ಅವುಗಳನ್ನೆಲ್ಲ ಹಿರಣ್ಯಕಶಿಪುವಿನ ಹೊಟ್ಟೆ ಬಗೆದಂತೆ ಬಗೆದೂ ಬಗೆದೂ, ತಮ್ಮ ಬಟ್ಟೆ ಹುಡುಕಿ ತೆಗೆಯುತ್ತಿರುವಾಗೆಲ್ಲ ಆ ಗಳ ಜೋಕಾಲಿಯಂತೆ ಜೀಕುತ್ತಿತ್ತು. ಲಂಗ ಜಾಕೀಟು ಮತ್ತು ಫ್ರಾಕ್ ತೊಡುವ ಹೆಣ್ಣುಮಕ್ಕಳಿಗೆಲ್ಲ ಒಂದೇ ತಾನ್‌ನಲ್ಲಿ ಕತ್ತರಿಸಿ ಹೊಲೆಸುತ್ತಿದ್ದುದರಿಂದ, ಸಮವಸ್ತ್ರದಂತೆ ಒಂದೇ ತರಹ ಇರುತ್ತಿದ್ದ ಬಟ್ಟೆಗಳಲ್ಲಿ ತಮ್ಮ ಅಳತೆಯದನ್ನು ಹುಡುಕಿ ಹಾಕಿಕೊಳ್ಳಬೇಕಿತ್ತು. ಪುಣ್ಯಕ್ಕೆ ಆಗಿನ ಕಾಲದಲ್ಲಿ ಮನೆಯಲ್ಲಿ ಮಕ್ಕಳು ಹೆಚ್ಚಿದ್ದರೂ, ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದರೂ, ಜನರಿಗೆ ಬಟ್ಟೆಗಳ ಖಯಾಲಿ ಅಷ್ಟಿರಲಿಲ್ಲ. ಪ್ರತಿಯೊಬ್ಬರ ಬಳಿಯೂ ನಾಲ್ಕೈದು ಜೊತೆ ಬಟ್ಟೆಗಳಿದ್ದರೆ ಅದೇ ದೊಡ್ಡದು. ಅದರಲ್ಲೂ ಎರಡು ಜೊತೆ ಮದುವೆ, ಮುಂಜಿಗೆಂದು ಟ್ರಂಕ್ ಸೇರಿ, ಎರಡು ಅಥವಾ ಮೂರು ಜೊತೆ ಇದ್ದರೆ ಹೆಚ್ಚು. ಈಗಿನ ಕಾಲದಂತೆ ಇರುವ ಒಂದು ಎರಡು ಮಕ್ಕಳಿಗೆ ಮೂರ್ನಾಲ್ಕು ಬೀರು ಬಟ್ಟೆಗಳಂತಿರಲಿಲ್ಲ. ಹಾಗಾಗಿ ಗಳ ತುಂಬಾ ವರ್ಷ

